ಬಸವ ಕಲ್ಯಾಣ	ಇಲ್ಲ	ಇಲ್ಲ	ಮು.ಮಾ.ಪ್ರಾಂಗಣ ರೂ.74/– ಪ್ರತಿ ಚ.ಅಡಿಗೆ, ಹುಲಸೂರು ಉಪ ಮಾರುಕಟ್ಟೆ ಪ್ರಾಂಗಣ ರೂ.45/– ಪ್ರತಿ ಚ.ಅಡಿಗೆ.	ಹುಲಸೂರು ಉಪ ಮಾರುಕಟ್ಟೆ ಪ್ರಾಂಗಣದಲ್ಲಿ 51 ನಿವೇಶನ ಹಂಚಿಕೆಗೆ ಉದ್ದೇಶಿಸಿದೆ.
ಬೀದರ್	ಇಲ್ಲ	ಇಲ್ಲ	ಪ್ರತಿ ಚದರಡಿಗೆ ರೂ.375/– ರಂತೆ ನಿಗಧಿಪಡಿಸಿದೆ.	ಪ್ರಸ್ತುತ 42 ನಿವೇಶನಗಳು ಹಂಚಿಕೆಗೆ ಉದ್ದೇಶಿಸಿ ಟೆಂಡರ್ ಪ್ರಕಟಣೆ ನೀಡುವ ಹಂತದಲ್ಲಿದೆ.

ಖೈದಿಗಳ ಬಿಡುಗಡೆ

503 (761) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ತೋಟಗಾರಿಕೆ ಹಾಗೂ ಬಂಧಿಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿವಿಧ ಜೈಲುಗಳನ್ನು ಜೀವಾವಧಿ ಶಿಕ್ಷೆಯನ್ನು ಅನುಭವಿಸುತ್ತಿರುವ ಎಷ್ಟು ಜನ ಖೈದಿಗಳನ್ನು ಸನ್ನಡತೆಯ ಆಧಾರದ ಮೇಲೆ ಬಿಡುಗಡೆ ಮಾಡಲು ಸರ್ಕಾರ ನಿರ್ಧರಿಸಿದೆ, ಈ ದಿಸೆಯಲ್ಲಿ ಇಲ್ಲಿಯವರೆವಿಗೆ ಸಾಧಿಸಿರುವ ಪ್ರಗತಿ ಏನು?

ಆ) ರಾಜ್ಯ ಸರ್ಕಾರದ ನಿರ್ಧಾರದ ಹಿನ್ನೆಲೆಯಲ್ಲಿ ರಾಜ್ಯದ ಯಾವ ಯಾವ ಜೈಲುಗಳಿಂದ ಎಷ್ಟೆಷ್ಟು ಖೈದಿಗಳು ಅವಧಿಪೂರ್ವ ಬಿಡುಗಡೆ ಯಾಗಲಿದ್ದಾರೆ, ಇವರು ಎಷ್ಟೆಷ್ಟು ವರ್ಷಗಳ ಕಾಲ ಶಿಕ್ಷೆ ಅನುಭವಿಸಿದ್ದರು (ಇಂತಹವರ ಹೆಸರು, ವಿವರ ನೀಡುವುದು);

ಇ) ಸನ್ನಡತೆಯ ಆಧಾರದ ಮೇಲೆ ಬಿಡುಗಡೆಯಾಗಿ ಹೊರ ಬರುವ ಖೈದಿಗಳು ಉತ್ತಮ ನಡತೆಯೊಂದಿಗೆ ಸಮಾಜದ ಮುಖ್ಯವಾಹಿನಿಗೆ ಸೇರ್ಪಡೆಯಾಗುವಲ್ಲಿ ಸರ್ಕಾರವು ಯಾವ ಪಾತ್ರಗಳನ್ನು ವಹಿಸುವುದು.

ಈ) ಇಂತಹವರ ಕಲ್ಯಾಣಕ್ಕೆ ಸರ್ಕಾರ ಯಾವುದಾದರೂ ಕಾರ್ಯಕ್ರಮಗಳನ್ನು ರೂಪಿಸುವುದೇ?

ಶ್ರೀ ಉಮೇಶ್ ವಿ. ಕತ್ತಿ (ತೋಟಗಾರಿಕೆ ಮತ್ತು ಬಂಧೀಖಾನೆ ಸಚಿವರು) :

ಅ) ಒಟ್ಟು 594 ಜನ ಖೈದಿಗಳು.

ಅಕಾಲಿಕ ಬಿಡುಗಡೆ ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. (ಆದರೆ ಇನ್ನೂ ಅಂತಿಮ ನಿರ್ಧಾರವಾಗಿರುವುದಿಲ್ಲ.)

ಆ) (1) 07 ವರ್ಷ ಮತ್ತು ಮೇಲ್ಪಟ್ಟು ವಾಸ್ತವಿಕ ಸಜೆ ಪೂರೈಸಿರುವ ಪುರುಷ ಜೀವಾವಧಿ ಶಿಕ್ಷಾ ಬಂದಿಗಳು :–

ಬೆಂಗಳೂರು ಕೇಂ.ಕಾ.	215
ಗುಲ್ಬರ್ಗಾ ಕೇಂ.ಕಾ.	58
ಬೆಳಗಾವಿ ಕೇಂ.ಕಾ.	101
ವಿಜಾಪೂರ ಕೇಂ.ಕಾ.	33
ಬಯಲು ಬಂದೀಖಾನೆ, ಕೋರಮಂಗಲ	19
ಮೈಸೂರು ಕೇಂ.ಕಾ.	66
ಧಾರವಾಡ ಕೇಂ.ಕಾ.	11
ಬಳ್ಳಾರಿ ಕೇಂ.ಕಾ.	36
	539

(2) 05 ವರ್ಷ ಮತ್ತು ಮೇಲ್ಪಟ್ಟು ವಾಸ್ತವಿಕ ಸಜೆ ಪೂರೈಸಿರುವ ಮಹಿಳಾ ಜೀವಾವಧಿ ಶಿಕ್ಷಾ ಬಂದಿಗಳು :–

ಬೆಂಗಳೂರು ಕೇಂ.ಕಾ.	10
ಗುಲ್ಬರ್ಗಾ ಕೇಂ.ಕಾ.	01
ಬೆಳಗಾವಿ ಕೇಂ.ಕಾ.	05
ಮೈಸೂರು ಕೇಂ.ಕಾ.	04
ಧಾರವಾಡ ಕೇಂ.ಕಾ.	01
ಬಳ್ಳಾರಿ ಕೇಂ.ಕಾ.	01
	22

(3) 60 ವರ್ಷ ಮೇಲ್ಪಟ್ಟು ವಯಸ್ಸಾಗಿ ಕನಿಷ್ಟ 05 ವರ್ಷ ಮತ್ತು ಮೇಲ್ಪಟ್ಟು ವಾಸ್ತವಿಕ ಸಜೆ ಪೂರೈಸಿರುವ ಪುರುಷ ಜೀವಾವಧಿ ಶಿಕ್ಷಾ ಬಂದಿಗಳು :–

ಬೆಂಗಳೂರು ಕೇಂ.ಕಾ.	10
ಬೆಳಗಾವಿ ಕೇಂ.ಕಾ.	07
ವಿಜಾಪೂರ ಕೇಂ.ಕಾ.	05
ಮೈಸೂರು ಕೇಂ.ಕಾ.	06
ಧಾರವಾಡ ಕೇಂ.ಕಾ.	02
	30

(4) 50 ವರ್ಷ ಮೇಲ್ಪಟ್ಟು ವಯಸ್ಸಾಗಿ ಕನಿಷ್ಟ 04 ವರ್ಷ ಮತ್ತು ಮೇಲ್ಪಟ್ಟು ವಾಸ್ತವಿಕ ಸಜೆ ಪೂರೈಸಿರುವ ಮಹಿಳಾ ಜೀವಾವಧಿ ಶಿಕ್ಷಾ ಬಂದಿಗಳು.

ಬೆಂಗಳೂರು ಕೇಂ.ಕಾ.	02
ಬಳ್ಳಾರಿ ಕೇಂ.ಕಾ.	01
	03
	ಒಟ್ಟು 594

ಶಿಕ್ಷಾ ಬಂದಿಗಳ ವಿವರಗಳುಳ್ಳ ವಿವರಣಾ ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ. (ಈ ಬಗ್ಗೆ ಇನ್ನೂ ಅಂತಿಮ ತೀರ್ಮಾನವಾಗಬೇಕಿದೆ).

ಇ) ಕಾರಾಗೃಹಗಳಲ್ಲಿ ಬಂಧಿಗಳಿಗೆ ಪವರ್‌ಲೂಮ್ ಮತ್ತು ಹ್ಯಾಂಟ್ ಲೂಮ್, ಟೈಲರಿಂಗ್, ಕಾರ್ಪೆಂಟರಿ, ಕಾರ್ಪೆಟ್ ತಯಾರಿಕೆ, ಪ್ರಿಂಟಿಂಗ್, ಚಮ್ಮಾರಿಕೆ, ಕಮ್ಮಾರಿಕೆ, ಟೆಂಟ್ ತಯಾರಿಸುವುದು, ಸೋಪು ಮತ್ತು ಪಿನಾಯಿಲ್ ತಯಾರಿಸುವುದು, ಬೇಕರಿ ತರಬೇತಿ, ಗಣಕಯಂತ್ರದ ತರಬೇತಿ ಮತ್ತು ಆಧುನಿಕ ರೀತಿಯಲ್ಲಿ ವ್ಯವಸಾಯ ಹಾಗೂ ತೋಟಗಾರಿಕೆ ತರಬೇತಿಯನ್ನು ನೀಡಲಾಗುತ್ತಿದ್ದು, ಶಿಕ್ಷಾ ಬಂದಿಗಳು ಬಿಡುಗಡೆಯ ನಂತರ ಸಮಾಜದ ಮುಖ್ಯವಾಹಿನಿಯಲ್ಲಿ ಬೆರೆತು ತಮ್ಮ ಸ್ವಂತ ಅವಲಂಬನೆಯಲ್ಲಿ ಬದುಕನ್ನು ನಿರ್ವಹಿಸಲು ಸಕ್ಷಮರನ್ನಾಗಿ ಮಾಡಲಾಗುತ್ತಿದೆ.

ಈ) ಅಕಾಲಿಕವಾಗಿ ಬಿಡುಗಡೆಯಾಗುವ ಬಂದಿಗಳಿಗೆ, ಕರ್ನಾಟಕ ಮೈನಾರಿಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್, ಡಿ.ದೇವರಾಜ ಅರಸ್ ಬ್ಯಾಕ್‌ವರ್ಡ್ ಕ್ಲಾಸಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಲಿಮಿಟೆಡ್ ಮತ್ತು ಡಾ: ಬಿ.ಆರ್. ಅಂಬೇಡ್ಕರ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಲಿಮಿಟೆಡ್ ರವರಿಂದ ಅತೀ ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯವನ್ನು ಒದಗಿಸಿ ಕಾರಾಗೃಹದಲ್ಲಿ ಪಡೆದ ವೃತ್ತಿ ತರಬೇತಿಯನ್ನು ಸದುಪಯೋಗಪಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ರೈತರ ವಿದೇಶ ಪ್ರವಾಸ

504 (762) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ವರ್ಷ ರಾಜ್ಯದ ಎಷ್ಟು ಜನ ರೈತರನ್ನು ಅಧ್ಯಯನ ಪ್ರವಾಸಕ್ಕಾಗಿ ಯಾವ್ಯಾವ ದೇಶಗಳಿಗೆ ಸರ್ಕಾರದ ವತಿಯಿಂದ ಕಳುಹಿಸಲಾಗಿತ್ತು; ಇದಕ್ಕಾಗಿ ಸರ್ಕಾರಕ್ಕೆ ತಗುಲಿದ ವೆಚ್ಚವೆಷ್ಟು (ಪೂರ್ಣ ವಿವರವನ್ನು ಒದಗಿಸುವುದು);

ಆ) ಈ ವಿದೇಶಿ ಪ್ರವಾಸದಿಂದ ಕೃಷಿ ಕ್ಷೇತ್ರಕ್ಕೆ/ ರೈತರಿಗೆ ಯಾವ ರೀತಿ ಅನುಕೂಲವಾಗಿದೆ;

ಇ) ಪ್ರಸಕ್ತ ಸಾಲಿನಲ್ಲಿಯೂ ಸಹ ರೈತರನ್ನು ವಿದೇಶಕ್ಕೆ ಕಳುಹಿಸುವ ಕಾರ್ಯಕ್ರಮ ಇದೆಯೇ; ಈ ಪ್ರವಾಸಕ್ಕೆ ರೈತರನ್ನು ಆಯ್ಕೆ ಮಾಡುವಾಗ ಪಾಲಿಸುವ ನಿಯಮಗಳೇನು;

ಈ) ಇಂತಹ ಸಮಯದಲ್ಲಿ ರೈತರನ್ನು ಆಯ್ಕೆ ಮಾಡುವಾಗ ಅತ್ಯಂತ ಹಿಂದುಳಿದ ಬೀದರ್ ಜಿಲ್ಲೆಯ ವಿಶೇಷವಾಗಿ ಭಾಲ್ಕಿ ಮತ್ತು ಕ್ಷೇತ್ರದ ರೈತರನ್ನು ಆಯ್ಕೆ ಮಾಡಲಾಗುವುದೇ?

ಶ್ರೀ ಎಸ್.ಎ. ರವಿಂದ್ರನಾಥ್ (ಕೃಷಿ ಸಚಿವರು) :

ಅ) ಕಳೆದ ವರ್ಷ ರಾಜ್ಯದ 528 ಜನ ರೈತರನ್ನು ಅಧ್ಯಯನ ಪ್ರವಾಸಕ್ಕಾಗಿ ಚೀನಾ ದೇಶಕ್ಕೆ ಸರ್ಕಾರದ ವತಿಯಿಂದ ಕಳುಹಿಸಲಾಗಿತ್ತು. ಇದಕ್ಕಾಗಿ ಸರ್ಕಾರಕ್ಕೆ ತಗಲಿದ ವೆಚ್ಚ ರೂ. 3,58,77,600/–

ಆ) ರೈತರಿಗೆ ಚೀನಾ ದೇಶದಲ್ಲಿನ ಕೃಷಿ ತಾಂತ್ರಿಕತೆಗಳ ಬಗ್ಗೆ ಅರಿವು ಮೂಡಿಸಲಾಗಿರುತ್ತದೆ. ಸದರಿ ತಾಂತ್ರಿಕತೆಗಳನ್ನು ತಮ್ಮ ಕ್ಷೇತ್ರಗಳಲ್ಲಿ ಅಳವಡಿಸಿ